# ಬಾಲ್ಕಿ ಚಿತ್ರದಲ್ಲಿ ಕಂಗನಾ



ಕಂಗನಾ ನಟಿಸುತ್ತಿರುವ 'ಮಣಿಕರ್ಣಿಕಾ' ಚಿತ್ರದ ಶೂಟಿಂಗ್ ಸಾಕಷ್ಟು ಸುದ್ದಿ ಮಾಡುತ್ತಿದೆ. ಝಾನ್ಸಿ ರಾಣಿಯ ವೇಷದಲ್ಲಿರುವ ಕಂಗನಾಳ ಹೊಸ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ರಾರಾಜಿಸುತ್ತಿವೆ. ಈ ಮಧ್ಯೆ ಕಂಗನಾ ಹೊಸ ಚಿತ್ರವೊಂದಕ್ಕೆ ಸಹಿ ಹಾಕಿರುವ ಸುದ್ದಿಯೂ ಬಂದಿದೆ. ಅದೂ ಅಮಿತಾಭ್ ಬಚ್ಚನ್ ಜತೆಗೆ!

ಈಗಷ್ಟೇ 'ಪ್ಯಾಡ್‌ಮ್ಯಾನ್' ಚಿತ್ರದ ಯಶಸ್ಸಿನಿಂದ ಹಿಗ್ಗಿರುವ ನಿರ್ದೇಶಕ ಆರ್.ಬಾಲ್ಕಿ, ಈಗ ಅರುಣಿಮಾ ಸಿಂಗ್ ಜೀವನ ಆಧರಿಸಿದ ಹೊಸ ಚಿತ್ರವೊಂದನ್ನು ಮಾಡಲು ಸಿದ್ಧತೆ ನಡೆಸಿದ್ದಾರೆ. ಅಂಗವಿಕಲೆಯಾಗಿದ್ದರೂ ಸಾಹಸದಿಂದ ಎವರೆಸ್ಟ್ ಶಿಖರ ಏರಿರುವ ಮೊದಲ ಮಹಿಳೆ ಅರುಣಿಮಾ. ಆಕೆಯ ಜೀವನ ಚರಿತ್ರೆ ಆಧರಿಸಿ ಬಾಲ್ಕಿ ಸಿನಿಮಾ ಮಾಡಲು ಹೊರಟಿದ್ದಾರೆ. ಕಂಗನಾ, ಅರುಣಿಮಾ ಪಾತ್ರ ವಹಿಸಿದರೆ, ಅಮಿತಾಭ್ ಬಚ್ಚನ್ ಆಕೆಯ ಸಾಹಸಕ್ಕೆ ಬೆನ್ನೆಲುಬಾಗಿ ನಿಲ್ಲುವ ಶ್ರೀಮಂತನ ಪಾತ್ರದಲ್ಲಿದ್ದಾರಂತೆ.

■ ಬಿಂದು


